# ಬಡವರಿಗೆ ಉಚಿತ ಮೊಬೈಲ್



ಈ ಮೊಬೈಲನ್ನು ಮಾರಿದ್ರೆ ಎಷ್ಟು ಹಣ ಬರಬಹುದು ಮಗಾ..?




ರೇವ್ ಪಾರ್ಟಿ ಅಂತ ಬರೆ ಎಂದರೆ,
ರೇಪ್ ಪಾರ್ಟಿ ಅಂತ ಬರೆದಿದ್ದಾರಲ್ರೀ..!






ಈಗಿನ ಟಿಕೆಟ್ ರೇಟು ಇದು. ಇಳಿಯುವಷ್ಟರಲ್ಲಿ ಹೆಚ್ಚಿಗೆ ಆಗುತ್ತೆ. ಅದನ್ನು ಇಳಿವಾಗ ಕೊಡಿ..!




ಮಗು ಇನ್ನು ಮುಗಿಯಿತು ಬಿಡು... ನಿಮ್ಮಮ್ಮ ಮೊಬೈಲ್‌ನಲ್ಲಿ ಮಾತನಾಡುವುದನ್ನು ಎಂದೂ ನಿಲ್ಸಲ್ಲ ಅನ್ಸುತ್ತೆ..!



ಪ್ರಿಯೆ ನೀನು ನನ್ನನ್ನು ಈಗ್ಲೂ ಲವ್ ಮಾಡದಿದ್ರೆ ನಾನು ಇನ್ನೊಂದ್ಸಲ ಆತ್ಮಹತ್ಯೆ ಮಾಡ್ಕೊಳ್ತೀನಿ!



## ಫೋನ್ ಬಿಲ್

ಗುಂಡನ ಮನೆಗೆ ಟೆಲಿಫೋನ್ ಬಿಲ್ ಬಂತು. ಬಿಲ್ಲನ್ನು ನೋಡಿ ಹೌಹಾರಿದ. ಹೆಂಡತಿ, ಮಗ, ಮಗಳು, ಕೆಲಸದವಳನ್ನು ಕರೆಸಿ ಯಾರು ಇಷ್ಟು ಫೋನ್ ಮಾಡಿದ್ದು ಎಂದು ಜೋರು ಮಾಡಿದ.

ಹೆಂಡತಿ: ನಾನು ಮನೇಲಿ ಫೋನ್ ಮಾಡೋದೆ ಇಲ್ಲ. ಯಾವಾಗಿದ್ದರೂ ಆಫೀಸಿನಲ್ಲೇ ಮಾಡ್ತೀನಿ.

ಮಗ: ಅಪ್ಪಾ ನಾನೂ ಅಷ್ಟೇ ಕಂಪೆನಿ ಫೋನನ್ನೇ ಬಳಸೋದು.

ಮಗಳು: ನನ್ನ ಬಾಯ್ ಫ್ರೆಂಡ್ ಮೊಬೈಲಿನಲ್ಲಷ್ಟೇ ನಾನು ಮಾತನಾಡೋದು.

ಕೆಲಸದವಳು: ನಾನೂ ಅಷ್ಟೆ.. ನಾನು ಎಲ್ಲಿ ಕೆಲಸ ಮಾಡುತ್ತೇನೋ ಅಲ್ಲೇ ಫೋನ್ ಮಾಡೋದು!

ಸಂಗ್ರಹ: ಡಿಎಸ್.ಪಂಕಜ ಸುಬ್ರಹ್ಮಣ್ಯ

## ದೋಷ



ಆತ: ನೀನು ಮದ್ಯಪಾನ ಮಾಡುತ್ತೀಯಾ?

ಈತ: ಎಂದೂ ಇಲ್ಲ.

ಆತ: ಧೂಮಪಾನ?

ಈತ: ಹೆಸರೇ ಎತ್ತಬೇಡಿ.

ಆತ: ಎಲೆ, ತಂಬಾಕು, ಮಟ್ಕಾ ಇತ್ಯಾದಿ ಏನಾದರೂ..

ಈತ: ಇಂತಹ ವಿಷಯದಲ್ಲಿ ನಾನು ನಾಲ್ಕು ಮಾರು ದೂರ.

ಆತ: ತುಂಬಾ ಒಳ್ಳೆಯದು. ಹಾಗಾದರೆ ನಿಮ್ಮಲ್ಲಿ ಹೆಸರಿಡಬಹುದಾದಂತಹ ಯಾವ ಒಂದು ದೋಷವೂ ಇಲ್ಲ ಎಂದಾಯ್ತು ಅಲ್ವಾ?

ಈತ: ಒಂದೇ ಒಂದು ಇದೆ. ಮನುಷ್ಯ ಅಂದ ಮೇಲೆ ಯಾವುದಾದರೂ ಒಂದು ಇರಲೇ ಬೇಕಲ್ಲಾ?

ಆತ: ಹಾಗಾದರೆ ಅದು..?

ಈತ: ಸುಳ್ಳು ಹೇಳುವುದು!

ಸಂಗ್ರಹ: ಮಲ್ಲಿಕಾರ್ಜುನ ಹ.ಬಗಲಿ